# ತುಮಕೂರು ಮಿತ್ರ

TUMKUR MITRA Kannada daily

ಕನ್ನಡ ದಿನಪತ್ರಿಕೆ

ಇದು ಜನರ ಧ್ವನಿ.....

ಸಂಪಾದಕ: ಪಿ.ಎನ್. ಮಂಜುನಾಥ(ಗೌಡ)

ಮೊ: 9060001842

email: tumkurmitra@gmail.com

ಸಂಪುಟ: 05 ಸಂಚಿಕೆ: 297 ದಿನಾಂಕ: 15-08-2021 ಭಾನುವಾರ REGN No: L2/RNP-1264/TMR/2020-22 RNI: KARKAN/2016/69263 ಪುಟ: 2 ಬೆಲೆ: 1.00 ರೂ

## ಜಿಎಸ್‌ಟಿ ರಾಜಕೀಯ ಮಾಡುವ ವಿಚಾರವಲ್ಲ

### ಸಿದ್ಧಗಂಗಾ ಮಠದಲ್ಲಿ ಭಗವಂತ ಖೂಬಾ



ತುಮಕೂರು: ಜಿಎಸ್‌ಟಿ ರಾಜಕೀಯ ಮಾಡುವ ವಿಚಾರವಲ್ಲ. ಆದರೂ ಕಾಂಗ್ರೆಸ್ ಪಕ್ಷದವರಿಗೆ ರಾಜಕೀಯ ಮಾಡಲು ಬೇರೆ ಯಾವು ವಿಚಾರವೂ ಸಿಗದ ಕಾರಣ ಜಿಎಸ್‌ಟಿಯನ್ನೆ ಮುಂದಿಟ್ಟು ರಾಜಕಾರಣ ಮಾಡಲು ಹೊರಟಿದ್ದಾರೆ ಎಂದು ಕೇಂದ್ರದ ರಾಸಾಯನಿಕ, ರಸಗೊಬ್ಬರ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಖಾತೆಯ ರಾಜ್ಯ ಸಚಿವ ಭಗವಂತ ಖೂಬಾ ಟೀಕಿಸಿದರು.

ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರ ಜಿಎಸ್‌ಟಿ ವಿಚಾರದಲ್ಲಿ ಎಲ್ಲ ಅಧಿಕಾರವನ್ನು ರಾಜ್ಯ ಸರ್ಕಾರಗಳಿಗೆ ಕೊಟ್ಟಿದೆ. ಆದರೂ ಕಾಂಗ್ರೆಸ್‌ನವರು ನಮ್ಮ ಪಾಲಿನ ಜಿಎಸ್‌ಟಿ ಹಣ ಬಂದಿಲ್ಲ ಎಂದು ಹೇಳುವದು ಅರ್ಥಹೀನವಾದುದು ಎಂದರು.

ನಗರದ ಸಿದ್ದಗಂಗಾ ಮಠಕ್ಕೆ ಭೇಟಿ ನೀಡಿ ಲಿಂ. ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ಗದ್ದುಗೆ ದರ್ಶನ ಪಡೆದು, ಮಠಾಧ್ಯಕ್ಷರಾದ ಶ್ರೀ ಸಿದ್ದಲಿಂಗ ಸ್ವಾಮೀಜಿಯವರ ಆಶೀರ್ವಾದ ಪಡೆದ ನಂತರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷ ಅಧಿಕಾರದಲ್ಲಿದ್ದಾಗ ಜಿಎಸ್‌ಟಿ ಜಾರಿಗೆ ತರಲು ಸಾಧ್ಯವಾಗಲಿಲ್ಲ ಏಕೆ ಎಂದು ಪ್ರಶ್ನಿಸಿದ ಅವರು, ಜಿಎಸ್‌ಟಿ ಮುಂದಿಟ್ಟುಕೊಂಡು ರಾಜಕೀಯ ಮಾಡುವುದು ತರವಲ್ಲ ಎಂದರು.

ಜಿಎಸ್‌ಟಿ ಸಂಬಂಧ ಪ್ರತಿ ತಿಂಗಳು ನಡೆಯುವ ಸಭೆಯಲ್ಲಿ ಕರ್ನಾಟಕದ ಪ್ರತಿನಿಧಿಯಾಗಿ ಪಾಲ್ಗೊಳ್ಳುವ ಸಚಿವರು ವಿಷಯ ಮಂಡಿಸುತ್ತಾರೆ. ಹೀಗಿರುವಾಗ ವಿನಾ ಕಾರಣ ಕೇಂದ್ರ ಸರ್ಕಾರದ ಕಡೆ ಬೊಟ್ಟು ಮಾಡಿ ತೋರಿಸುವುದು ಸರಿಯಲ್ಲ. ಜಿಎಸ್‌ಟಿ ವಿಚಾರವಾಗಿ ಕೇಂದ್ರ ಸರ್ಕಾರ ತಾರತಮ್ಯ ಮಾಡುತ್ತಿಲ್ಲ ಎಂದರು.

ಕೇಂದ್ರದಿಂದ ನನ್ನ ವ್ಯಾಪ್ತಿಗೆ ಒಳಪಡುವ ಇಲಾಖೆಗಳಿಂದ ಕರ್ನಾಟಕ ರಾಜ್ಯಕ್ಕೆ ಸಾಧ್ಯವಾಗುವಷ್ಟು ಕೊಡುಗೆ ನೀಡಲು ಶ್ರಮಿಸುವುದಾಗಿ ರಾಸಾಯನಿಕ, ರಸಗೊಬ್ಬರ, ಹೊಸ ಮತ್ತು ನವೀಕರಿಸಬಹುದಾದ ಇಂಧನ ಖಾತೆಯ ರಾಜ್ಯ ಸಚಿವ ಭಗ ವಂತ ಖೂಬಾ ಇಂದಿಲ್ಲಿ ತಿಳಿಸಿದರು.

ನನ್ನ ಖಾತೆಗೆ ಫರ್ಟಿಲೈಸರ್, ಕಮಿಕಲ್ಸ್ ಹಾಗೂ ಫಾರ್ಮಸಿಟಿಕಲ್ ಇಲಾಖೆಗಳು ಒಳಪಡಲಿದ್ದು, ಈಗಾಗಲೇ ರಾಜ್ಯಕ್ಕೆ ಫಾರ್ಮಸಿಟಿಕಲ್ ಪಾರ್ಕ್ ಘೋಷಣೆ ಮಾಡಲಾಗಿದೆ. ಮಂಗಳೂರಿನಲ್ಲಿ ಪ್ಲಾಸ್ಟಿಕ್ ಪಾರ್ಕ್ ಸ್ಥಾಪನೆಯಾಗಲಿದೆ. ಹಾಗೂ ಅನೇಕ ಕಡೆ ಸೋಲಾರ್ ಪಾರ್ಕ್‌ಗಳನ್ನು ಸ್ಥಾಪಿಸುವ ಸಂಬಂಧ ಟೆಂಡರ್‌ಗಳನ್ನು (2ನೇಪುಟಕ್ಕೆ)

## ಟೂಡಾದಿಂದ ವಿವಿಧ ಕಾಮಗಾರಿಗಳ ಅಭಿವೃದ್ಧಿ



ತುಮಕೂರು: ಭಾರತ ದೇಶದ 75ನೇ ಸ್ವಾತಂತ್ರ್ಯ ಅಮೃತಮಹೋತ್ಸವ ಪ್ರಯುಕ್ತ ನಗರದ ಶೆಟ್ಟಿಹಳ್ಳಿ ಸರ್ವೆ ನಂಬರ್ 62ನೇ ಉದ್ಯಾನವನ್ನು ಸ್ವತಂತ್ರ ಉದ್ಯಾನವನವೆಂದು ನಾಮಕರಣ ಮಾಡಿ, ವಿಶೇಷ ಅಭಿವೃದ್ಧಿಪಡಿಸಲು ಯೋಜನೆ ರೂಪಿಸಲಾಗಿದೆ ಎಂದು ಶಾಸಕ ಜಿ.ಬಿ. ಜ್ಯೋತಿಗಣೇಶ್, ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿ.ಎಸ್. ನಾಗೇಶ್ ತಿಳಿಸಿದರು.

ನಗರದ ಟೂಡಾ ಕಚೇರಿ ಸಭಾಂಗಣದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಸಂಬಂಧ ಉದ್ಯಾನವನದ ಮಾದರಿಯನ್ನು ಪ್ರದರ್ಶಿಸಿ, ಗಿಡ ನೆಡುವ ಮೂಲಕ ಆ.15 ರಂದು ಇದಕ್ಕೆ ಚಾಲನೆ ನೀಡುವುದಾಗಿ ತಿಳಿಸಿದರು.

ನಗರದ ಗುಬ್ಬಿಗೇಟ್ ಸರ್ಕಲ್‌ನಿಂದ ಐಡಿಎಸ್‌ಎಂಟಿ ಲೇಔಟ್‌ವರೆಗಿನ ಒಟ್ಟು 2.1 ಕಿ.ಮೀ. ರಸ್ತೆ ಅಭಿವೃದ್ಧಿ ಸಂಬಂಧ 18 ಎಕರೆ ಭೂಸ್ವಾಧೀನಪಡಿಸಿಕೊಂಡಿದ್ದು, ಮೊದಲ ಹಂತದಲ್ಲಿ ದಿಬ್ಬೂರು ವೃತ್ತದಿಂದ ಐಡಿಎಸ್‌ಎಂಟಿ ಲೇಔಟ್ ವರೆಗಿನ 1.6 ಕಿ.ಮೀ. ರಸ್ತೆಯನ್ನು ಅಭಿವೃದ್ಧಿಪಡಿಸಲು 9.6 ಕೋಟಿ ರೂ. ವೆಚ್ಚದ ಯೋಜನೆ ರೂಪಿಸಿದ್ದು, ಶೀಘ್ರದಲ್ಲೆ ಟೆಂಡರ್ ಕರೆದು ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ನಗರದ ಗಾರ್ಡನ್ ರಸ್ತೆಯಲ್ಲಿರುವ ವಸತಿ ಬಡಾವಣೆಯಲ್ಲಿನ (2ನೇಪುಟಕ್ಕೆ)

## ದುಂದುವೆಚ್ಚ ಮಾಡಿ ಕಾಮಗಾರಿ ನಿರ್ವಹಣೆ: ಡಾ.ರಫೀಕ್ ಆರೋಪ



ತುಮಕೂರು: ಕೇಂದ್ರ ಸರ್ಕಾರ ಹಾಗೂ ಪ್ರಧಾನಮಂತ್ರಿ ನರೇಂದ್ರ ಮೋದಿಯವರ ಕನಸಿನ ಯೋಜನೆ ಸ್ಮಾರ್ಟ್‌ಸಿಟಿಗೆ ತುಮಕೂರು ನಗರ ಆಯ್ಕೆಯಾಗಿದ್ದು, ನಗರದಲ್ಲಿ ಇದರಡಿ ಅನುಷ್ಠಾನಗೊಳಿಸುತ್ತಿರುವ ಕಾಮಗಾರಿಗಳು ಕಳಪೆ ಗುಣಮಟ್ಟದಿಂದ ಕೂಡಿದ್ದು, ದುಂದುವೆಚ್ಚ ಮಾಡಿ ಕಾಮಗಾರಿ ನಿರ್ವಹಿಸಲಾಗುತ್ತಿದೆ ಎಂದು ಮಾಜಿ ಡಾ. ಎಸ್.ರಫೀಕ್ ಅಹಮದ್ ಆರೋಪಿಸಿದರು.

ನಗರದಲ್ಲಿ ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2015ರಲ್ಲಿ ಕೇಂದ್ರ ಸರ್ಕಾರ ಸ್ಮಾರ್ಟ್‌ಸಿಟಿ ಯೋಜನೆಗೆ ಆಯ್ಕೆ ಮಾಡಿದ 100 ನಗರ ಗಳಲ್ಲಿ ತುಮಕೂರು ಸೇರಿದ್ದು, ತುಮಕೂರನ್ನು ಸುಂದರ ನಗರವಾಗಿಸುವ ಕನಸು ನನಸಾಗಿಲ್ಲ ಎಂದು ದೂರಿದರು.

ನಗರದ ನಾಗರಿಕರು ಸ್ಮಾರ್ಟ್ ಸಿಟಿ ಯೋಜನೆಗೆ ತುಮಕೂರು ಆಯ್ಕೆಗೊಂಡಿದ್ದಕ್ಕೆ ಸಂತೋಷಗೊಂಡಿದ್ದು, ಕಾಮಗಾರಿಗಳ ಅದ್ವಾನದಿಂದ ಬೇಸರಗೊಂಡಿದ್ದಾರೆ ಎಂದರು.

ಸ್ಮಾರ್ಟ್ ಸಿಟಿ ಯೋಜನೆಗಾಗಿ ಕೇಂದ್ರ ಸರ್ಕಾರ 294 ಕೋಟಿ, ರಾಜ್ಯ ಸರ್ಕಾರ 297 ಕೋಟಿ ಸೇರಿ ಒಟ್ಟು 591 ಕೋಟಿ ರೂ. ಅನುದಾನ ಬಂದಿದ್ದು, ಇದರಲ್ಲಿ 471 ಕೋಟಿ ರೂ. ಖರ್ಚಾಗಿದೆ. ಉಳಿಕೆ 120 ಕೋಟಿ ರೂ. ಹಾಗೆ ಇದೆ ಎಂದರು.

ಸ್ಮಾರ್ಟ್‌ಸಿಟಿ ಕಾಮಗಾರಿ ಅನುಷ್ಠಾನದಲ್ಲಿ ಸ್ಥಳೀಯ ಪ್ರದೇಶಾಭಿವೃದ್ಧಿಗೆ ಆದ್ಯತೆ ನೀಡಬೇಕು. ಇದನ್ನು ಬಿಟ್ಟು ಬೇರೆ ಕಡೆ ಕಾಮಗಾರಿ ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಆರೋಪಿಸಿದರು.

ನಗರದ ಮೂಲಭೂತ ಸೌಕರ್ಯಕ್ಕೆ ಒತ್ತುಕೊಡುವುದನ್ನು ಬಿಟ್ಟು ಅನಾವಶ್ಯಕ ಕಾಮಗಾರಿಗಳಿಗೆ ಹಣವನ್ನು ಪೋಲು ಮಾಡಲಾಗುತ್ತಿದೆ ಎಂದು ತಿಳಿಸಿದರು.

ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಆರ್. ರಾಮಕೃಷ್ಣ ಮಾತನಾಡಿ, 1885ರಿಂದ 1947ರ ತನಕ ಹೋರಾಟ ಮಾಡಿ ದೇಶಕ್ಕೆ ಸ್ವಾತಂತ್ರ್ಯ ತಂದುಕೊಟ್ಟಿದ್ದು ಕಾಂಗ್ರೆಸ್ ಪಕ್ಷ ಎಂದ ಅವರು, ಬಿಜೆಪಿ ದೇಶಕ್ಕಾಗಿ ಕಾಂಗ್ರೆಸ್‌ನ ಕೊಡುಗೆ ಏನು ಎಂದು ಪ್ರಶ್ನೆ ಮಾಡುತ್ತಿರುವುದು ಸರಿಯಲ್ಲ ಎಂದರು.

ಈ ಹಿಂದೆ ಕಾಂಗ್ರೆಸ್ ಸರ್ಕಾರದಲ್ಲಿ ಪ್ರಧಾನಮಂತ್ರಿಯಾಗಿದ್ದ ಇಂದಿರಾಗಾಂಧಿಯವರು ಉಳುವವನೆ ಭೂಮಿಯ ಒಡೆಯ ಎಂಬ ಕಾನೂನು ತಂದರೆ ಬಿಜೆಪಿ ಪ್ರಧಾನಮಂತ್ರಿ ನರೇಂದ್ರ ಮೋದಿಯವರು ಉಳ್ಳವನೆ ಭೂಮಿಯ ಒಡೆಯ ಎನ್ನುವಂತೆ ಮಾಡುತ್ತಿದ್ದಾರೆ ಎಂದು ದೂರಿದರು.

ಸುದ್ದಿಗೋಷ್ಠಿಯಲ್ಲಿ ಮಾಜಿ ಮೇಯರ್ ಫರೀದಾಬೇಗಂ, ಮುಖಂಡರಾದ ನಯಾಜ್ ಅಹಮದ್, ಆಟೋ ರಾಜು, ಜೆ.ಕುಮಾರ್, ಮೆಹಬೂಬ್‌ಪಾಷ, ಪುಟ್ಟರಾಜು, ಮಹೇಶ್, ಶೆಟ್ಟಾಳಯ್ಯ ಮುಂತಾದವರು ಭಾಗವಹಿಸಿದ್ದರು.

## ಮೆಘಾ ರಕ್ತದಾನ ಶಿಬಿರಕ್ಕೆ ಚಾಲನೆ: 110 ಯೂನಿಟ್ ರಕ್ತ ಸಂಗ್ರಹ



ತುಮಕೂರು: ಕೋವಿಡ್ 3ನೇ ಅಲೆಯ ಮುಂಜಾಗ್ರತೆಯಾಗಿ ರಕ್ತದ ಕೊರತೆಯಾಗದಂತೆ ಕರ್ನಾಟಕ ಕೌಶಲ್ಯ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರು ಹಾಗೂ ಹಾಲಪ್ಪ ಪ್ರತಿಷ್ಠಾನದ ಅಧ್ಯಕ್ಷರಾದ ಮುರಳೀಧರ ಹಾಲಪ್ಪ ಅವರು, ವಿವಿಧ ಸಂಸ್ಥೆಗಳಾದ ರೆಡ್‌ಕ್ರಾಸ್, ಜಿಲ್ಲಾ ಆಸ್ಪತ್ರೆ, ಸತ್ಯಸಾಯಿ ಆರ್ಗನೈಸೇಷನ್, ಒನ್ ನೇಷನ್, ಎನ್‌ಸಿಸಿ, ಎನ್‌ಎಸ್‌ಎಸ್, ಶಾಲಾ ಕಾಲೇಜುಗಳ ಆಡಳಿತ ಮಂಡಳಿಗಳು, ತುಮಕೂರು ವಿಶ್ವವಿದ್ಯಾನಿಲಯ, ಸೇವಾದಳ್, ಇನ್ನರ್ ವ್ಹೀಲ್, ಐಎಂಎ, ಆಟೋ ಯೂನಿಯನ್, ಗಿವ್ ಬ್ಯಾಕ್, ಕೈಗಾರಿಕಾ ಸಂಘ ಹಾಗೂ ವಿವಿಧ ರೋಟರಿ ಸಂಸ್ಥೆಗಳ ಸಹಯೋಗದೊಂದಿಗೆ ಶನಿವಾರ ನಗರದ ರವೀಂದ್ರ ಕಲಾಕ್ಷೇತ್ರದಲ್ಲಿ 'ಮೆಘಾ' ರಕ್ತದಾನ ಶಿಬಿರಕ್ಕೆ ಚಾಲನೆ ನೀಡಲಾಯಿತು.

ಭಾರತದ 75ನೇ ವರ್ಷದ ಸ್ವಾತಂತ್ರ್ಯೋತ್ಸವ ಸಂಭ್ರಮಾ ಚರಣೆಯ ಪ್ರಯುಕ್ತ ಹಮ್ಮಿಕೊಂಡಿದ್ದ ರಕ್ತದಾನ ಶಿಬಿರಕ್ಕೂ ಮುನ್ನ ಮಹಾತ್ಮಗಾಂಧಿ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ, ಸ್ವಾತಂತ್ರ್ಯೋತ್ಸವದ ಧ್ವಜಾರೋಹಣ ನೆರವೇರಿ ಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷರು ಹಾಗೂ ಹಾಲಪ್ಪ ಪ್ರತಿಷ್ಠಾನದ ಅಧ್ಯಕ್ಷರಾದ ಮುರಳೀಧರ ಹಾಲಪ್ಪ, ಕಳೆದ 15 ದಿನಗಳ ಹಿಂದೆ ಜಿಲ್ಲಾಡಳಿತದೊಂದಿಗೆ 3ನೇ ಅಲೆಗೆ ಸಂಬಂಧಿಸಿದಂತೆ ಮುಂಜಾಗ್ರತಾ ಕ್ರಮಗಳ ಕುರಿತು ಚರ್ಚೆ ನಡೆಸಿದಾಗ ಆ ಚರ್ಚೆಯಲ್ಲಿ ವಿಶೇಷವಾಗಿ ರಕ್ತದ ಕೊರತೆಯಾಗದಂತೆ ಮುಂಜಾಗ್ರತೆ ವಹಿಸಬೇಕೆಂಬ ಸಲಹೆಗಳು ಕೇಳಿ ಬಂದ ಹಿನ್ನಲೆಯಲ್ಲಿ ವಿವಿಧ ಸಂಘ ಸಂಸ್ಥೆಗಳೊಡಗೂಡಿ ತುಮಕೂರು ನಗರವೂ ಸೇರಿದಂತೆ ಜಿಲ್ಲೆಯ ಎಲ್ಲಾ ತಾಲ್ಲೂಕುಗಳಲ್ಲೂ ರಕ್ತದಾನ ಶಿಬಿರ ಹಮ್ಮಿಕೊಂಡು ಸಪ್ತಾಹದ ರೀತಿಯಲ್ಲಿ ರಕ್ತ ಸಂಗ್ರಹ ಮಾಡುವ ತೀರ್ಮಾನಕ್ಕೆ (2ನೇಪುಟಕ್ಕೆ)

## ತ್ಯಾಜ್ಯ ನಿರ್ವಹಣೆಗೆ ಸೂಕ್ತ ಕ್ರಮ ಕೈಗೊಳ್ಳಿ: ಡಿಸಿ

ತುಮಕೂರು: ಮಹಾನಗರ ಪಾಲಿಕೆ ಸೇರಿದಂತೆ ನಗರ, ಪಟ್ಟಣ ಪಂಚಾಯತ್ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ತ್ಯಾಜ್ಯ ನಿರ್ವಹಣೆಗೆ ಸೂಕ್ತ ಕ್ರಮವಹಿಸುವಂತೆ ಜಿಲ್ಲಾಧಿಕಾರಿ ವೈ.ಎಸ್. ಪಾಟೀಲ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಜರುಗಿದ ಜಿಲ್ಲಾ ಮಟ್ಟದ ಟಾಸ್ಕ್ ಫೋರ್ಸ್ ಸಮಿತಿ ಸಭೆಯ ಅಧ್ಯಕ್ಷತೆವಹಿಸಿ ಮಾತನಾಡಿದ ಅವರು, ಜಿಲ್ಲೆಯಲ್ಲಿ ತ್ಯಾಜ್ಯ ನಿರ್ವಹಣೆಯನ್ನು ಸಮರ್ಪಕವಾಗಿ ಕೈಗೊಳ್ಳುವ ಮೂಲಕ ಸ್ವಚ್ಛತೆ ಕಾಪಾಡಬೇಕು ಎಂದು ನಿರ್ದೇಶಿಸಿದರು.

ರಾಜ್ಯ ಹೆದ್ದಾರಿಗೆ ಹೊಂದಿಕೊಂಡಂತಿರುವ ನಗರ ಅಥವಾ ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವ ರಸ್ತೆ ಬದಿಯಲ್ಲಿ ಕಸದ ರಾಶಿಯೇ ಕಂಡುಬರುತ್ತಿದೆ. ಮೊದಲು ಅಲ್ಲಿನ ತ್ಯಾಜ್ಯದ ವಿಲೇವಾರಿಗೆ ಕ್ರಮ ವಹಿಸಬೇಕು ಎಂದು ಸೂಚನೆ ನೀಡಿದರು.

ಪ್ಲಾಸ್ಟಿಕ್ ತ್ಯಾಜ್ಯ ನಿರ್ವಹಣೆಗೆ ಮೊದಲಾದ್ಯತೆ ನೀಡಬೇಕು.



ಹೆಚ್ಚಾದ ಪ್ಲಾಸ್ಟಿಕ್ ಬಳಕೆಯಿಂದಾಗಿ ತ್ಯಾಜ್ಯದ ಸಮಸ್ಯೆ ಹೆಚ್ಚಾಗುತ್ತಿದೆ. ನಿಷೇಧಿತ ಪ್ಲಾಸ್ಟಿಕ್ ಬಳಕೆಗೆ ಸಂಪೂರ್ಣ ಕಡಿವಾಣ ಹಾಕಲು ಪ್ಲಾಸ್ಟಿಕ್ ಮಾರಾಟ ಮಾಡುತ್ತಿರುವ ಮಳಿಗೆಗಳ ಮೇಲೆ ದಾಳಿ ನಡೆಸಿ ದಂಡ ವಿಧಿಸಿ ಪ್ಲಾಸ್ಟಿಕ್ ಬಳಕೆಯನ್ನು ನಿರ್ಮೂಲನೆ ಮಾಡಬೇಕು ಎಂದು ಸೂಚಿಸಿದರು.

ಮನೆ ಮನೆ ಕಸ ಸಂಗ್ರಹಣಾ ಕಾರ್ಯ ಸಮರ್ಪಕವಾಗಿ ನಡೆಯಬೇಕು. ನೂರರಷ್ಟು ಮನೆ ಮನೆ ಕಸ ಸಂಗ್ರಹಣೆ ಮಾಡಿದರೆ ತ್ಯಾಜ್ಯ ಸಮಸ್ಯೆಯನ್ನು ಮೊದಲ ಹಂತದಲ್ಲೇ ಕಡಿಮೆ ಮಾಡಬಹುದು. ಜಿಲ್ಲೆಯ ನಗರ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕಸ ಸಂಗ್ರಹಣೆ ಕಾರ್ಯ ನಡೆಸಬೇಕು ಎಂದು ನಿರ್ದೇಶಿಸಿದರು.

ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ಕಸ ಸುರಿಯುವವರ ವಿರುದ್ಧ ಶಿಸ್ತು ಕ್ರಮ ಕೈಗೊಂಡು ಸ್ವಚ್ಛತೆಗೆ ಆದ್ಯತೆ ನೀಡಬೇಕು. ಮುಖ್ಯವಾಗಿ ಕೈಗಾರಿಕಾ ಪ್ರದೇಶಗಳಲ್ಲಿ ತ್ಯಾಜ್ಯ ನಿರ್ವಹಣೆ ಮಾಡಬೇಕು ಎಂದು ಸೂಚನೆ ನೀಡಿದರು. ಸಭೆಯಲ್ಲಿ ವಿವಿಧ ಇಲಾಖೆಗಳ ಜಿಲ್ಲಾ ಮಟ್ಟದ ಅಧಿಕಾರಿಗಳು ಉಪಸ್ಥಿತರಿದ್ದರು.

## 2022ರ ಜೂನ್, ಜುಲೈ ವೇಳೆಗೆ ಪಾವಗಡಕ್ಕೆ 'ತುಂಗೆ'



ಪಾವಗಡ ತಾಲ್ಲೂಕು ರಾಜವಂತಿ ಗ್ರಾಮದಲ್ಲಿ ನರೇಗ ಯೋಜನೆಯಲ್ಲಿ ಸ್ವಚ್ಚಗೊಳಿಸಿರುವ ಪುರಾತನ ಕಲ್ಯಾಣಿಗೆ ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅತೀಕ್ ಅಹ್ಮದ್ ಭೇಟಿ ಮಾಡಿ ಪರಿಶೀಲಿಸಿದರು. ಈ ಸಂದರ್ಭದಲ್ಲಿ ಜಿಪಂ ಸಿಇಓ ಡಾ.ಕೆ.ವಿದ್ಯಾಕುಮಾರಿ, ಇಓ ಶಿವರಾಜ್, ಗ್ರಾಮ ಪಂಚಾಯಿತಿ ಅಧ್ಯಕ್ಷರು ಗ್ರಾಮಸ್ಥರು ಉಪಸ್ಥಿತರಿದ್ದರು.

ಪಾವಗಡ: ಮುಂದಿನ ವರ್ಷ ಜೂನ್, ಜುಲೈ ತಿಂಗಳಲ್ಲಿ ತುಂಗಭದ್ರಾ ಕುಡಿಯುವ ನೀರು ಪಾವಗಡ ತಾಲ್ಲೂಕಿಗೆ ಬರುವ ನಿರೀಕ್ಷೆ ಇದೆ ಆಗ ತಾಲ್ಲೂಕಿನ ಎಲ್ಲಾ ಗ್ರಾಮಗಳಿಗೆ ನದಿ ಮೂಲಕ ಬಹುಗ್ರಾಮ ಯೋಜನೆ ಕುಡಿಯುವ ನೀರು ನೀಡಲಾಗುವುದು ಎಂದು ಪಂಚಾಯತ್ ರಾಜ್ ಮತ್ತು ಗ್ರಾಮೀಣಾಭಿವೃದ್ಧಿ ಇಲಾಖೆ ಪ್ರಧಾನ ಕಾರ್ಯದರ್ಶಿ ಅತೀಕ್ ಅಹ್ಮದ್ ತಿಳಿಸಿದರು.

ತಾಲ್ಲೂಕು ಪಂಚಾಯಿತಿ ಸಭಾಂಗಣದಲ್ಲಿ ತಾಲ್ಲೂಕು ಮಟ್ಟದ ಅಧಿಕಾರಿಗಳೊಂದಿಗೆ ಪರಿಶೀಲನೆ ನಡೆಸಿದ ನಂತರ ಪತ್ರಕರ್ತರೊಂದಿಗೆ ಮಾತನಾಡಿದ ಅವರು, ಜಲಜೀವ ಮಿಷನ್ ಅಡಿ ತಾಲ್ಲೂಕಲ್ಲಿ ಶೇ.90ರಷ್ಟು ಕೆಲಸ ಮುಗಿದೆ 16ಕೆಲಸಗಳು ಮುಗಿದಿವೆ. ಉಳಿದ 8ಕಡೆ ಪ್ರಗತಿಯಲ್ಲಿದ್ದು, ಕೆಲವು ಸಮಸ್ಯೆಗಳ ಬಗ್ಗೆ ಅರಣ್ಯ ಇಲಾಖೆಯೊಂದಿಗೆ ಚರ್ಚಿಸಿ ಪರಿಹಾರಕ್ಕೆ ಕ್ರಮಕೈಗೊಳ್ಳುತ್ತಿದ್ದೇನೆ ಎಂದರು.

2018ರ ಮಾರ್ಚ್‌ನಲ್ಲಿ ಸರ್ಕಾರದ ಬಹುಗ್ರಾಮ ಯೋಜನೆಗೆ ಅನುಮತಿ ಸಿಕ್ಕಿದೆ ಕೆಲಸ ಅಂತಿಮ ಹಂತದಲ್ಲಿದ್ದು, ಜಾಕ್‌ವೆಲ್ ನಿರ್ಮಾಣ ಕಾರ್ಯ ಹೊಸಪೇಟೆಯಲ್ಲಿ ಭರದಿಂದ ನಡೆಯುತ್ತಿದೆ. ತಾಲ್ಲೂಕಿನ ಎಲ್ಲಾ 32ಗ್ರಾಮ ಪಂಚಾಯಿತಿಗಳಲ್ಲಿ ಮುಂದಿನ ಜೂನ್, ಜುಲೈ ತಿಂಗಳು ನದಿ ಮೂಲದ ಕುಡಿಯವ ನೀರಿನ ಸಿದ್ದತೆ ಆಗುತ್ತಿದೆ ನೀರನ್ನು ಎಲ್ಲಾ ಹಳ್ಳಿಗಳಿಗೆ ಪೂರೈಸಲಾಗುವುದು ಎಂದು ತಿಳಿಸಿದರು.

ಘನತ್ಯಾಜ್ಯ ವಿಲೇವಾರಿ ಯೋಜನೆ ತಾಲ್ಲೂಕಿನ ಎಲ್ಲಾ 32ಗ್ರಾಮ ಪಂಚಾಯಿತಿಯಲ್ಲಿ ಅನುಷ್ಟಾನಗೊಳ್ಳುತ್ತಿದೆ 2 ಗ್ರಾಮ ಪಂಚಾಯಿತಿಗಳಲ್ಲಿ ಜಮೀನು ಸಿಗಬೇಕಿದೆ. ಜಿಲ್ಲಾಧಿಕಾರಿಗಳೊಂದಿಗೆ ಚರ್ಚೆ ನಡೆಸಲಾಗುವುದು ಘನತ್ಯಾಜ್ಯ ಸಂಗ್ರಹಕ್ಕೆ ವಾಹನ ಖರೀದಿಗೆ ಸೂಚನೆ ನೀಡಲಾಗಿದೆ 2ಗ್ರಾಮ ಪಂಚಾಯಿತಿಯಲ್ಲಿ ಜಾಗ ಸಿಗಬೇಕಿದೆ ಎಂದು ಹೇಳಿದರು.

ಮಹಾತ್ಮಗಾಂಧಿ ನರೇಗ ಯೋಜನೆ ಕಾಮಗಾರಿಗಳು ಪ್ರಗತಿಯಲ್ಲಿವೆ ಅಂತರ್ಜಲ ಛೇತನ ಕಾರ್ಯಕ್ರಮ ತೆಗೆದುಕೊಳ್ಳಲಾಗಿದೆ ಅಟೋಗ್ಲೋ ಸಂಸ್ಥೆ ಇದರ ಬಗ್ಗೆ ಕೆಲಸ ಮಾಡುತ್ತಿದೆ. ಬೋಲ್ಡರ್ ಪರಿಶೀಲನೆ ಕಲ್ಯಾಣಿಗಳ ಪುನಃಶ್ಚೇತನ ಕೆರೆಗಳ ಅಭಿವೃದ್ಧಿ ಬಾವಿಗಳ ಅಂತರ್ಜಲ ರೀಚಾರ್ಜ್ ಮಾಡುವ ಕೆಲಸ ನಿರ್ವಹಿಸುತ್ತಿದ್ದಾರೆ ಎಂದರು.

ಸಭೆಯಲ್ಲಿ ಜಿಲ್ಲಾ ಪಂಚಾಯಿತಿ ಸಿಇಓ ಕೆ. ವಿದ್ಯಾಕುಮಾರಿ ತಾಲ್ಲೂಕು ಪಂಚಾಯಿತಿ ಇಓ ಶಿವರಾಜ್, ತಾಲ್ಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

## ಪಾರ್ಕ್‌ಗಳ ಅಭಿವೃದ್ಧಿಗೆ ನಾಗರೀಕ ಸಮಿತಿಗಳು ಕೈಜೋಡಿಸಬೇಕು



ತುಮಕೂರು: ನಗರದಲ್ಲಿರುವ ಪಾರ್ಕುಗಳ ಅಭಿವೃದ್ಧಿಯಾಗಬೇಕಾದರೆ ನಾಗರಿಕ ಸಮಿತಿಗಳು ಪಾಲಿಕೆಯೊಂದಿಗೆ ಕೈಜೋಡಿಸಬೇಕಿದೆ ಎಂದು ಶಾಸಕ ಜಿ.ಬಿ.ಜೋತಿಗಣೇಶ್ ತಿಳಿಸಿದ್ದಾರೆ.

ನಗರದ ಅಶೋಕ ನಗರದ ಚಂದ್ರಶೇಖರ್ ಪಾರ್ಕು ಉದ್ಘಾಟಿಸಿ ಮಾತನಾಡುತಿದ್ದ ಅವರು, ಸ್ಮಾರ್ಟ್‌ಸಿಟಿ ಹಾಗೂ ವಿವಿಧ ಯೋಜನೆಗಳಲ್ಲಿ ಸುಮಾರು 12 ಪಾರ್ಕುಗಳನ್ನು ಈಗಾಗಲೇ ಅಭಿವೃದ್ಧಿ ಪಡಿಸಿ, ಉದ್ಘಾಟಿಸಲಾಗಿದೆ. ಕೆಲವು ಪಾರ್ಕುಗಳನ್ನು ಆ ಭಾಗದ ನಾಗರಿಕ ಸಮಿತಿಗಳೇ ಮುಂದೆ ಬಂದು ದಾನಿಗಳ ಸಹಾಯದಿಂದ ಅಭಿವೃದ್ಧಿ ಪಡಿಸಿ,ನಿರ್ವಹಣೆ ಮಾಡುತ್ತಿರುವ ಉದಾಹರಣೆಗಳಿವೆ.ಹಾಗೆಯೇ ಚಂದ್ರಶೇಖರ್ ಆಜಾದ್ ಪಾರ್ಕನ್ನು ಸ್ಮಾರ್ಟ್‌ಸಿಟಿಯ ಸುಮಾರು 13 ಲಕ್ಷ ರೂ ನಗರಪಾಲಕೆ ಅನುದಾನದ ಜೊತೆಗೆ,ನಾಗರಿಕರ ಸಮಿತಿಯ ಕೆಲವರು ತಮ್ಮ ಶಕ್ತಾನುಸಾರ ದಾನ ಮಾಡಿ,ಅತ್ಯಂತ ಸುಸಜ್ಜಿತವಾದ ಲಘು ವ್ಯಾಯಾಮಕ್ಕೆ ಅನುಕೂಲವಾಗುವಂತೆ ಪಾರ್ಕನ್ನು ಅಭಿವೃದ್ಧಿ ಪಡಿಸಿಕೊಂಡಿದ್ದಾರೆ. ಇದಕ್ಕಾಗಿ (2ನೇಪುಟಕ್ಕೆ)

# ಗಿಡ ಬೆಳೆಸುವ ಕಾರ್ಯ ನಿರಂತರವಾಗಿರಲಿ:ಕೆಎನ್ಆರ್

ಮಧುಗಿರಿ : ಮುಂದಿನ ಪೀಳಿಗೆಗಾಗಿ ಉತ್ತಮ ವಾತಾವಾರಣ ನಿರ್ಮಿಸುವ ನಿಟ್ಟಿನಲ್ಲಿ ಗಿಡಗಳನ್ನು ಬೆಳಸುವ ಕಾರ್ಯ ನಿರಂತರವಾಗಿ ನಡೆಯಬೇಕು ಎಂದು ಮಾಜಿ ಶಾಸಕ ಕೆ.ಎನ್.ರಾಜಣ್ಣ ತಿಳಿಸಿದರು.



ತಾಲೂಕಿನ ಜಡೇಗೊಂಡನ ಹಳ್ಳಿ ಗ್ರಾಮದಲ್ಲಿ ತಾಲೂಕು ಕಾಂಗ್ರೆಸ್ ಸಮಿತಿ ವತಿಯಿಂದ ಶನಿವಾರ ಹಮ್ಮಿಕೊಂಡಿದ್ದ ತಾಲೂಕಿನಲ್ಲಿ ಕೊರೋನಾ ದಿಂದ ಮೃತಪಟ್ಟವರ ಸ್ಮರಣಾರ್ಥವಾಗಿ ಉಸಿರು ನಿಂತವರ ಹೆಸರಿನಲ್ಲಿ ಹಸಿರು ಬೆಳೆಸುವ ಕಾರ್ಯಕ್ರಮವನ್ನು ಉಧ್ಘಾಟಿಸಿ ಮಾತನಾಡಿದ ಅವರು, ಇಂದು ನಮ್ಮ ಪರಿಸರ ಶೇ. 70 ರಷ್ಟು ಕಲುಷಿತ ಗೊಂಡಿದ್ದು ಹೆಚ್ಚು ಗಿಡ ಮರಗಳನ್ನು ಬೆಳಸುವ ಮೂಲಕ ನೈಸರ್ಗಿಕ ಆಮ್ಲಜನಕ ಉತ್ಪಾದನೆಗೆ ಒತ್ತು ನೀಡಬೇಕು.ಕೃಷಿಕರು ಹೊಲಗಳ ಬದುಗಳಲ್ಲಿ ಗಿಡಗಳನ್ನು ನೆಟ್ಟು ಮಕ್ಕಳಂತೆ ಪೋಷಿಸಬೇಕು.

ಭೂಮಿಯ ಉಷ್ಣಾಂಶ ಹೆಚ್ಚುತ್ತಿದ್ದು ಮುಂದಿನ 20 ವರ್ಷಗಳಲ್ಲಿ ಸಮುದ್ರದ ಅಂಚಿನ ನಗರಗಳು ಮುಳುಗಡೆಯಾಗಲಿವೆ ಎಂದು ವಿಶ್ವ ಸಂಸ್ಥೆ ವರದಿ ಮಾಡಿದೆ ನಾವೆಲ್ಲರು ಹೆಚ್ಚು ಗಿಡಗಳನ್ನು ಬೆಳಸುವ ನಿಟ್ಟಿನಲ್ಲಿ ಕಾರ್ಯೋನ್ಮುಖರಾಗಬೇಕು ಎಂದರು.

ಕ್ಷೇತ್ರದ 248 ಬೂತ್ ಗಳಲ್ಲಿ ಸುಮಾರು 6 ಸಾವಿರ ಗಿಡಗಳನ್ನು ನಮ್ಮ ಪಕ್ಷದ ಕಾರ್ಯಕರ್ತರು ನೆಟ್ಟಿದ್ದು ಇವುಗಳ ಮರಗಳಾಗಿ ಬೆಳೆದಾಗ ಕೋವಿಡ್ ನಿಂದ ಮೃತಪಟ್ಟವರ ಮತ್ತು ಶ್ರೀ ರಂಗಪ್ಪ ಹಾಗೂ ಗೋವಿಂದರಾಜು ರವರ ನೆನಪು ಚಿರಸ್ಥಾಯಿಯಾಗಿರುತ್ತದೆ ಎಂದರು.

ಸಿದ್ದರಬೆಟ್ಟದ ಶ್ರೀ ಶಿವಾನಂದ ಶಿವಾಚಾರ್ಯ ಸ್ವಾಮೀಜಿ ದಿವ್ಯಸಾನ್ನಿಧ್ಯ ವಹಿಸಿ ಮಾತನಾಡಿ, ಕೆ.ಎನ್.ರಾಜಣ್ಣ ನವರ ಸಮಾಜ ಮುಖಿ ಚಿಂತನೆಯ ಫಲವಾಗಿ ಸಸಿ ನೆಡುವ ಈ ಕಾರ್ಯಕ್ರಮ ರಾಜ್ಯದಲ್ಲೇ ಮೊದಲ ಬಾರಿಗೆ ಈ ಗ್ರಾಮದಲ್ಲಿ ನಡೆದಿದೆ. ಮಹಾಗಣಿ ಗಿಡಗಳನ್ನು ಬೆಳಸುವುದರಿಂದ ರೈತರು ಆರ್ಥಿಕವಾಗಿ ಸಬಲರಾಗುತ್ತಾರೆ ಈ ಕುರಿತು ರೈತರಿಗಾಗಿ ಕಾರ್ಯಾಗಾರ ನಡೆಸಿ ಸರಕಾರದ ಯೋಜನೆಗಳ ಬಗ್ಗೆ ಜಾಗೃತಿ ಮೂಡಿಸಲಾಗುವುದು ಕ್ಷೇತ್ರದಲ್ಲಿ ಹಸಿರು ಕ್ರಾಂತಿಗೆ ನಾಂದಿ ಹಾಡಿರುವ ಕೆ.ಎನ್.ಆರ್. ಪುನ: ಶಾಸಕರಾಗಿ ನೀರಾವರಿ ಯೋಜನೆಗಳಿಗೆ ವೇಗ ನೀಡಬೇಕು ಎಂದರು.

ಕ್ರಿಬ್ಕೋ ನಿರ್ದೇಶಕ ಆರ್. ರಾಜೇಂದ್ರ, ಡಿ.ಸಿ.ಸಿ.ಬ್ಯಾಂಕ್ ಉಪಾಧ್ಯಕ್ಷ ಜಿ.ಜೆ ರಾಜಣ್ಣ, ನಿರ್ದೇಶಕರಾದ ನಾಗೇಶ್ ಬಾಬು, ಜಿ.ಎನ್.ಮೂರ್ತಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾದ ಎಂ.ಎಸ್. ಮಲ್ಲಿಕಾರ್ಜುನಯ್ಯ, ಎಸ್.ಆರ್. ರಾಜಗೋಪಾಲ್, ತಾಲೂಕು ಯುವ ಕಾಂಗ್ರೆಸ್ ಅಧ್ಯಕ್ಷ ಎಸ್.ಡಿ. ವೆಂಕಟೇಶ್, ಕಾರ್ಯಾಧ್ಯಕ್ಷ ಬಿ.ಎನ್.ನಾಗಾರ್ಜುನ, ತಾ.ಪಂ. ಮಾಜಿ.ಅಧ್ಯಕ್ಷೆ ಇಂದಿರಾದೇನನಾಯ್ಕ್, ಸ್ವಾತಂತ್ರ್ಯ ಹೋರಾಟಗಾರ ಶಂಕರಪ್ಪ, ಪುರಸಭೆ ಮಾಜಿ ಅಧ್ಯಕ್ಷ ರಾದ ಎಂ.ಕೆ.ನಂಜುಂಡಯ್ಯ, ಅಯೂಬ್, ಎನ್. ಗಂಗಣ್ಣ, ಸದಸ್ಯ ಮಂಜುನಾಥ್, ರಾಜ್ಯ ಮಹಿಳಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಸುವರ್ಣಮ್ಮ, ಜಿ.ಪಂ.ಮಾಜಿ ಸದಸ್ಯ ಎಸ್.ಡಿ.ಕೃಷ್ಣಪ್ಪ, ಮುಖಂಡರಾದ ದೀಪಕ್, ಕಂಬಣ್ಣ ಇದ್ದರು.

# ಉಚಿತ ಮಧುಮೇಹ ಶಿಬಿರ




ತುಮಕೂರು: ನಗರದ ವಿನಾಯಕ ನಗರದ ಮೊದಲನೇ ಕ್ರಾಸ್ ನಲ್ಲಿರುವ ಲಲಿತ ನರ್ಸಿಂಗ್ ಹೋಂ ನಲ್ಲಿ ಉಚಿತ ಮಧುಮೇಹ ಶಿಬಿರ ಏರ್ಪಡಿಸಲಾಗಿತ್ತು. ಡಾ.ಎ.ಎಸ್. ಗಿರೀಶ್ ನೇತೃತ್ವದಲ್ಲಿ ಹಮ್ಮಿಕೊಳ್ಳಲಾಗಿದ್ದ ಈ ಶಿಬಿರದಲ್ಲಿ 50ಕ್ಕೂ ಹೆಚ್ಚು ಜನರ ಮಧುಮೇಹ ಆರೋಗ್ಯ ಪರೀಕ್ಷೆ ನಡೆಸಲಾಯಿತು. ಫ್ಯೂಜನ್ ಹೆಲ್ತ್ ಕೇರ್ ವತಿ ಯಿಂದ ಉಚಿತ ಔಷಧಗಳನ್ನು ವಿತರಿಸಲಾಯಿತು. ಶಿಬಿರದಲ್ಲಿ ಡಾ. ರುಬಿನಾ, ಶುಶ್ರೂಕಿಯರಾದ ಗಂಗಾ, ಸುಮಾ, ದಿವ್ಯ, ಫಾರ್ಮ ಸಿಸ್ಟ್ ವಿನಯ್, ಲ್ಯಾಬ್ ಟೆಕ್ನಿಷಿ ಯನ್ ಚಂದನ್ ಸೇರಿದಂತೆ ಫ್ಯೂಜನ್ ಹೆಲ್ತ್ ಕೇರ್ ಪ್ರತಿನಿಧಿ ಮಂಜುನಾಥ್ ಇದ್ದರು. ಶಿಬಿರದಲ್ಲಿ ಮಧುಮೇಹ ರೋಗಿಗಳ ರಕ್ತಪರೀಕ್ಷೆ, ಬಿಪಿ, ಇಸಿಜಿ ತಪಾಸಣೆ ನಡೆಸಲಾಯಿತು.

## ಆ. 15: ಹಿರಿಯ ವಿದ್ಯಾರ್ಥಿಗಳ ಸಂಘ ಉದ್ಘಾಟನೆ

ತುಮಕೂರು: ಚೇತನ ವಿದ್ಯಾ ಮಂದಿರ ಹಿರಿಯ ವಿದ್ಯಾರ್ಥಿಗಳ ಸಂಘದ ಉದ್ಘಾಟನಾ ಸಮಾರಂಭ ಆ. 15 ರಂದು ಬೆಳಿಗ್ಗೆ 10.30ಕ್ಕೆ ನಡೆಯಲಿದೆ. ಮುಖ್ಯ ಅತಿಥಿಗಳಾಗಿ ಸರ್ವೋದಯ ಎಜುಕೇಷನ್ ಸೊಸೈಟಿಯ ಅಧ್ಯಕ್ಷ ಎನ್.ಆರ್. ಜಗದೀಶ್, ಉಪಾಧ್ಯಕ್ಷ ಹೆಚ್. ಸುಬ್ಬರಾಯ್, ಕಾರ್ಯದರ್ಶಿ ಜಿ. ಸೀತರಾಮ್, ಜಂಟಿ ಕಾರ್ಯದರ್ಶಿ ಕೆ.ವಿ. ಸುಬ್ಬರಾವ್, ಚೇತನ ವಿದ್ಯಾಮಂದಿರದ ಪ್ರಾಂಶುಪಾಲರಾದ ಕೆ. ನಾಗರಾಜರಾವ್ ಭಾಗವಹಿಸುವರು. ಇದೇ ಸಂದರ್ಭದಲ್ಲಿ ಸಮಾಜ ಸೇವಕರಾದ ಬಿ. ಕಾಂತರಾಜಯ್ಯ ಅವರನ್ನು ಅಭಿನಂಧಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

## ಕೋವಿಡ್ ಸೋಂಕಿನಿಂದ ಚೇತರಿಸಿಕೊಂಡವರಿಗೆ ಆ.16ರಿಂದ ಕ್ಷಯ ರೋಗ ಪತ್ತೆ ಆಂದೋಲನ

ತುಮಕೂರು: ಜಿಲ್ಲಾ ಕ್ಷಯ ರೋಗ ನಿರ್ಮೂಲನಾ ಅಧಿಕಾ ರಿಗಳ ಕಚೇರಿಯು ಜಿಲ್ಲಾದ್ಯಂತ ಆ.16ರಿಂದ 31ರ ವರೆಗೆ ಕೋವಿಡ್ 19 ಸೋಂಕಿನಿಂದ ಗುಣಮುಖರಾದವರು ಹಾಗೂ ಅವರ ಕುಟುಂಬ ಸದಸ್ಯರಿಗೆ ಸಕ್ರಿಯ ಕ್ಷಯರೋಗಿಗಳ ಪತ್ತೆ ಆಂದೋಲನಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ.



ಮೊದಲನೇ ಶ್ರಾವಣ ಮಾಸದ ಪ್ರಯುಕ್ತ ತುಮಕೂರು ನಗರದ ಅಮರಜ್ಯೋತಿನಗರ ಬಡಾವಣೆಯ ಕೆಂಪೇಗೌಡ ರಸ್ತೆಯಲ್ಲಿರು ಶ್ರೀ ಶನೈಶ್ಚರ ಸ್ವಾಮಿಯ ದೇವಾಲಯದಲ್ಲಿ ವಿಶೇಷ ಪೂಜಾ ಕಾರ್ಯಕ್ರಮ ಜರುಗಿದವು. ಕೋವಿಡ್ –19 ತಡೆಗಟ್ಟಲು ಜಿಲ್ಲಾಧಿಕಾರಿಗಳು ಆದೇಶಿಸಿದರು ಮಾರ್ಗಸೂಚಿಯಂತೆ ಭಕ್ತರಿಗೆ ಯಾವುದೇ ಪ್ರವೇಶವಿಲ್ಲದೆ ಅರ್ಚಕರು ದೇವಸ್ಥಾನದ ಒಳಗೆ ವಿಶೇಷ ಪೂಜೆಯನ್ನು ನೆರವೇರಿಸಿದರು. ಸ್ವಾಮಿಗೆ ವಿಶೇಷ ಹೂವಿನ ಅಲಂಕಾರ ಮಾಡಿ ಹೋಮ ಹವನಗಳ ಮೂಲಕ ದೇಶದಲ್ಲಿ ಅಂಟಿಕೊಂಡಿರುವ ಮಹಾಮಾರಿ ಕೋವಿಡ್ ರೋಗ ನಿರ್ಮೂಲನೆ ಆಗಲಿ ಎಂದು ಪ್ರಾರ್ಥಿಸಲಾಯಿತ್ತು.

## ಏಕಲವ್ಯ, ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗೆ ಅರ್ಜಿ ಆಹ್ವಾನ

ತುಮಕೂರು: ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯು 2020ನೇ ಸಾಲಿನ ಏಕಲವ್ಯ ಹಾಗೂ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಾಗಿ ಕ್ರೀಡಾ ಕ್ಷೇತ್ರದಲ್ಲಿ ಅಸಾಧಾರಣ ಪ್ರತಿಭೆಯನ್ನು ತೋರಿರುವ ಕ್ರೀಡಾಪಟು ಹಾಗೂ ಕ್ರೀಡಾ ಪೋಷಕರಿಂದ ಅರ್ಜಿ ಆಹ್ವಾನಿಸಿದೆ.

ಅರ್ಜಿ ಸಲ್ಲಿಸುವವರು ಅರ್ಜಿ ನಮೂನೆ ಹಾಗೂ ಮಾರ್ಗಸೂಚಿಗಳನ್ನು ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಸಹಾಯಕ ನಿರ್ದೇಶಕರ ಕಚೇರಿಯಲ್ಲಿ ಪಡೆದು, ಭರ್ತಿ ಮಾಡಿದ ಅರ್ಜಿಯನ್ನು ನಿಗಧಿತ ದಿನಾಂಕದೊಳಗಾಗಿ ಸಲ್ಲಿಸಬೇಕು.

ಅರ್ಜಿ ಸಲ್ಲಿಸಲು ಏಕಲವ್ಯ ಪ್ರಶಸ್ತಿಗಾಗಿ ಆಗಸ್ಟ್ 25 ಹಾಗೂ ಕರ್ನಾಟಕ ಕ್ರೀಡಾ ಪೋಷಕ ಪ್ರಶಸ್ತಿಗಾಗಿ ಆಗಸ್ಟ್ 24 ಕಡೆಯ ದಿನವಾಗಿದೆ.

ಹೆಚ್ಚಿನ ಮಾಹಿತಿಗಾಗಿ ನಗರದ ಮಹಾತ್ಮ ಗಾಂಧಿ ಕ್ರೀಡಾಂಗಣ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯ ಸಹಾಯಕ ನಿರ್ದೇಶಕರ ಕಛೇರಿ ಅಥವಾ ದೂ.ಸಂ. 0816–2278124ನ್ನು ಸಂಪರ್ಕಿಸಬೇಕೆಂದು ಸಹಾಯಕ ನಿರ್ದೇಶಕ ನಾಗರಾಜ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಜಿಎಸ್‌ಟಿ ರಾಜಕೀಯ ಮಾಡುವ ವಿಚಾರವಲ್ಲ

(1ನೇಪುಟದಿಂದ) ಕರೆಯಲಾಗಿದೆ ಎಂದರು.

ರಾಜ್ಯದಲ್ಲಿ ಇಫ್ಕೋ ನ್ಯಾನೋ ಟೆಕ್ನಾಲಜಿ ಉತ್ಪಾದಿಸುವ ಪ್ರಕ್ರಿಯೆಯೂ ಪ್ರಾರಂಭವಾಗಿದೆ ಎಂದರು. ಸಿದ್ದಗಂಗಾ ಮಠ ಪವಿತ್ರವಾ ದಂತಹ ಸ್ಥಳ. ಇಲ್ಲಿ ದೊಡ್ಡ ಪ್ರಮಾಣದಲ್ಲಿ ವಿದ್ಯಾರ್ಥಿಗಳಿಗೆ ದಾಸೋಹದ ಮುಖಾಂತರ ವಿದ್ಯಾರ್ಜನೆ ಮಾಡುತ್ತಾ ಅನೇಕ ದಶಮಾನಗಳಿಂದ ಸಿದ್ದಗಂಗಾ ಮಠ ಲಿಂಗೈಕ್ಯ ಡಾ. ಶ್ರೀ ಶಿವಕುಮಾರ ಸ್ವಾಮೀಜಿಯವರ ನೇತೃತ್ವದಲ್ಲಿ ಲಕ್ಷಾಂತರ ವಿದ್ಯಾರ್ಥಿಗಳಿಗೆ ವಿದ್ಯಾ ದಾನ ಮಾಡಿ ವಿಶ್ವ ಪ್ರಸಿದ್ದಿಯಾಗಿದೆ ಎಂದರು.

ಇಂತಹ ಮಹಾನ್ ಸಂಸ್ಥೆಯ ಎಸ್‌ಐಟಿಯಲ್ಲಿ ನಾನು ಕೂಡ ವಿದ್ಯಾರ್ಥಿಯಾಗಿ ಇಂಜಿನಿಯ ರಿಂಗ್ ಮುಗಿಸಿದ್ದೇನೆ. ಸಿದ್ದಗಂಗಾ ಮಠದಲ್ಲಿ ನನಗೆ ಸಿಕ್ಕಿದ ಸಂಸ್ಕಾರ, ಸಂಸ್ಕೃತಿ ನನ್ನ ಜೀವನದಲ್ಲಿ ಅನೇಕ ಘನ ಕಾರ್ಯಗಳನ್ನು ಮಾಡಲು ಸಾಧ್ಯವಾಯಿತು ಎಂದರು.

ನರೇಂದ್ರ ಮೋದಿಯವರ ಸಂಪುಟದಲ್ಲಿ ನನಗೆ ಅವಕಾಶ ಮಾಡಿಕೊಟ್ಟಿದ್ದಾರೆ. ಪುಣ್ಯ ಕ್ಷೇತ್ರಕ್ಕೆ ಬಂದು ಶ್ರೀಗಳ ಗದ್ದುಗೆ ದರ್ಶನ ಪಡೆದು, ಸಿದ್ದಲಿಂಗ ಸ್ವಾಮೀಜಿಯವರ ಆಶೀರ್ವಾದ ಪಡೆದು ಹೊಸ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಲು ಶಕ್ತಿ ನೀಡುವಂತೆ ಪ್ರಾರ್ಥಿಸಿದ್ದೇನೆ ಎಂದು ಅವರು ಹೇಳಿದರು.

ಈ ಸಂದರ್ಭದಲ್ಲಿ ಶಾಸಕ ಜ್ಯೋತಿಗಣೇಶ್, ಮಾಜಿ ಸಚಿವ ಸೊಗಡು ಶಿವಣ್ಣ ಮತ್ತಿತರರು ಉಪಸ್ಥಿತರಿದ್ದರು.

## ನಾಗರೀಕ ಸಮಿತಿಗಳು ಕೈಜೋಡಿಸಬೇಕು

(1ನೇಪುಟದಿಂದ) 26ನೇ ವಾರ್ಡಿನ ನಾಗರಿಕ ಸಮಿತಿಗೆ ತುಂಬು ಹೃದಯ ಧನ್ಯವಾದ ತಿಳಿಸಲಾಗುವುದೆಂದರು.

ನಗರದಲ್ಲಿರುವ ಪಾರ್ಕುಗಳ ಪತ್ತೆಗೆ ನಗರಪಾಲಿಕೆಯ ಮೇಯರ್ ಹಾಗೂ ಸದಸ್ಯರು ಮತ್ತು ಆಯುಕ್ತರು,ಜಿಲ್ಲಾ ಪಂಚಾಯಿತಿ ಸಿಇಓ ನೇತೃತ್ವದಲ್ಲಿ ಪಾರ್ಕುಗಳ ಗುರುತು ಹಚ್ಚಲು ಚಾಲನೆ ನೀಡಲಾಗಿದೆ.2008ರವರೆಗೆ 548 ಪಾರ್ಕು ಗಳಿದ್ದು,ಆನಂತರದಲ್ಲಿ ಸುಮಾರು 300ಕ್ಕೂ ಹೆಚ್ಚು ಪಾರ್ಕುಗಳು ಇದ್ದು, ಪಾಲಿಕೆಯ ಲೆಕ್ಕದಲ್ಲಿ 250 ಮಾತ್ರ ಇವೆ. ಹಾಗಾಗಿ ಲಭ್ಯವಿರುವ ಪಾರ್ಕುಗಳಲ್ಲಿಯೇ ವಿವಿಧ ಅನುದಾನಗಳನ್ನು ಬಳಸಿ ಅಭಿವೃದ್ದಿ ಪಡಿಸಲಾಗಿದೆ. ಇದರ ಜೊತೆಗೆ ನಿರ್ವಹಣೆಗೆ ಆಯಾಯ ನಾಗರಿಕ ಸಮಿತಿಗಳಿಗೆ ವಹಿಸಲು ತೀರ್ಮಾನಿಸಲಾಗಿದೆ.ಸಿದ್ದರಾಮೇಶ್ವರ ಬಡಾವಣೆ, ಅಶೋಕನಗರ, ಸೇರಿದಂತೆ ಹಲವು ಕಡೆ ನಾಗರಿಕ ಸಮಿತಿಗಳು ಉತ್ತಮವಾಗಿ ಕಾರ್ಯನಿರ್ವಹಿಸುತ್ತಿವೆ.ಹಾಗಾಗಿ ನಾಗರಿಕ ಸಮಿತಿಗಳಿಗೆ ನಿರ್ವಹಣೆ ಮತ್ತು ಅಭಿವೃದ್ದಿಯ ಜವಾಬ್ದಾರಿ ವಹಿಸಲು ಮುಂದಾಗಿದೆ ಎಂದು ಶಾಸಕ ಜಿ.ಬಿ.ಜೋತಿಗಣೇಶ್ ತಿಳಿಸಿದರು.

ತುಮಕೂರು ಮೇಯರ್ ಬಿ.ಜಿ.ಕೃಷ್ಣಪ್ಪ ಮಾತನಾಡಿ,ನಗರದಲ್ಲಿರುವ ಪಾರ್ಕುಗಳ ಅಭಿವೃದ್ದಿಯ ಹಿನ್ನಲೆಯಲ್ಲಿ ಅವುಗಳ ಜಿಯೋಗ್ರಾಪಿಕಲ್ ಸರ್ವೆ ನಡೆಯುತ್ತಿದೆ. ನಗರದ ಹೊರ ವಲಯದಲ್ಲಿ ಹೆಚ್ಚಿನ ಪಾರ್ಕುಗಳ ಗುರುತು ಹಚ್ಚಿ ಅವುಗಳ ಅಭಿವೃದ್ದಿಗೆ ಹೆಚ್ಚಿನ ಒತ್ತು ನೀಡಲಾಗುತ್ತಿದೆ. ನಾಗರಿಕ ಸಮಿತಿಗಳು ಹೆಚ್ಚಿನ ರೀತಿಯಲ್ಲಿ ಜವಾಬ್ದಾರಿ ವಹಿಸಿಕೊಂಡರೆ ನಿರ್ವಹಣೆ ಸಾಧ್ಯ. ಪ್ರಸ್ತುತ ನಗರದಲ್ಲಿ 14 ಪಾರ್ಕುಗಳ ಒತ್ತುವರಿಯಾಗಿದ್ದು, ಅವುಗಳಲ್ಲಿ 6ನ್ನು ತೆರವುಗೊಳಿಸಲಾಗಿದೆ. ಉಳಿದವುಗಳನ್ನು ಶೀಘ್ರದಲ್ಲಿಯೆ ತೆರವುಗೊಳಿಸಲಾಗುವುದು ಎಂದರು.

26ನೇ ವಾರ್ಡಿನ ಪಾಲಿಕೆ ಸದಸ್ಯ ಮಲ್ಲಿಕಾರ್ಜುನಯ್ಯ ಮಾತನಾಡಿ,ನಮ್ಮ ವಾರ್ಡಿನಲ್ಲಿ ಅತಿ ಹೆಚ್ಚು ಕಾಮಗಾರಿಗಳು ನಡೆಯುತ್ತಿವೆ. ಪಾರ್ಕುಗಳ ಜೊತೆಗೆ,ರಸ್ತೆ, ಚರಂಡಿ,ಕುಡಿಯುವ ನೀರು ಸೇರಿದಂತೆ ಅಗತ್ಯ ಮೂಲಭೂತ ಸೌಕರ್ಯಗಳನ್ನು ಕಲ್ಪಿಸಲಾಗಿದೆ.ಇದು ವಾರ್ಡಿನ ನಾಗರಿಕ ಸಮಿತಿಯ ಮುಖಂಡರ ಸಹಕಾರವೂ ಕಾರಣ. ಇದಕ್ಕಾಗಿ ಎಲ್ಲರಿಗೂ ಕೃತಜ್ಞತೆ ಸಲ್ಲಿಸುತ್ತೇನೆ ಎಂದರು. ಕಾರ್ಯಕ್ರಮದಲ್ಲಿ ನಾಗರಿಕ ಸಮಿತಿ ಮುಖಂಡರಾದ ಬಸವರಾಜು, ವೆಂಕಟಸ್ವಾಮಿ, ವೆಂಕಟೇಶಯ್ಯ,ಕೊಪ್ಪಲ್ ನಾಗರಾಜು, ಡಿ.ಚಂದ್ರಪ್ಪ, ಸುಜಾತಚಂದ್ರಶೇಖರ್, ಜೋತಿ, ಸಿವಿಎನ್ ಚೇಂಬರ್‌ನ ಪದಾಧಿಕಾರಿಗಳು, ಮುಖಂಡರು, ದಾನಿಗಳು ಉಪಸ್ಥಿತರಿದ್ದರು.

# ಟೂಡಾದಿಂದ ವಿವಿಧ ಕಾಮಗಾರಿಗಳ ಅಭಿವೃದ್ಧಿ

(1ನೇಪುಟದಿಂದ) ಸಿ.ಎ. ನಿವೇಶನದಲ್ಲಿ 1 ಕೋಟಿ ರೂ. ವೆಚ್ಚದಲ್ಲಿ 3 ಷಟಲ್ ಕೋರ್ಟ್‌ಗಳ ಒಳಾಂಗಣ ಕ್ರೀಡಾಂಗಣ ನಿರ್ಮಿಸಲು ಯೋಜನಾ ವರದಿ ತಯಾರಿಸಿದ್ದು, ಟೆಂಡರ್ ಕಾಮಗಾರಿ ಕೈಗೊಳ್ಳಲಾಗುವುದು ಎಂದರು.

ಟೂಡಾ ವ್ಯಾಪ್ತಿಯಲ್ಲಿ ಸುಮಾರು 800ಕ್ಕೂ ಹೆಚ್ಚು ಉದ್ಯಾನವನಗಳಿದ್ದು, ಮಂಜುನಾಥ ನಗರ, ಮಹಾಲಕ್ಷ್ಮಿ ನಗರ, ಶೆಟ್ಟಿಹಳ್ಳಿ ಮಾರುತಿನಗರ, ಅರಳೀಮರದ ಪಾಳ್ಯ, ಸದಾಶಿವನಗರ, ಸರಸ್ವತಿ ಪುರಂ ಹಾಗೂ ತುಮಕೂರು ಕಸಬಾ ಹೋಬಳಿಯು ಹೆಚ್ಚು ವಿಸ್ತೀರ್ಣವಿರುವ 10ಕ್ಕೂ ಹೆಚ್ಚು ಪಾರ್ಕ್‌ಗಳನ್ನು ಮೊದಲ ಹಂತದಲ್ಲಿ ಅಭಿವೃದ್ಧಿಪಡಿಸಲು ಅನುಮೋದನೆ ನೀಡಲಾಗಿದೆ ಎಂದರು.

ಕೆರೆಗಳ ಅಭಿವೃದ್ಧಿ ಯೋಜನೆಗಳಡಿ ಒಟ್ಟು 10.50 ಕೋಟಿ ರೂ.ಗಳ ವೆಚ್ಚದಲ್ಲಿ ವಿವಿಧ ಅಭಿವೃದ್ಧಿ ಕಾಮಗಾರಿ ಕೈಗೊಳ್ಳಲು ಟೂಡಾ ಅನುಮೋದನೆ ನೀಡಿದ್ದು, ಇದರ ವ್ಯಾಪ್ತಿಯ ಗಂಗಸಂದ್ರ ಕೆರೆ ಅಭಿವೃದ್ಧಿಗಾಗಿ 6.30 ಕೋಟಿ ರೂ. ಮೀಸಲಿಡಲಾಗಿದೆ. ಗಾರೆ ನರಸಯ್ಯನಕಟ್ಟೆ ಸೌಂದರ್ಯೀಕರಣ ಕಾಮಗಾರಿಗೆ 90 ಲಕ್ಷ ರೂ.ಗಳು, ಕೆಸರಮಡು ಗ್ರಾಮದ ಜೋಗಿಕಟ್ಟೆ ಅಭಿವೃದ್ಧಿಗಾಗಿ 2 ಕೋಟಿ ರೂ., ಮೈದಾಳ ಅಮಾನಿಕೆರೆ ಅಭಿವೃದ್ಧಿಗಾಗಿ 1.15 ಕೋಟಿ ರೂ.ಗಳನ್ನು ಕಾಯ್ದಿರಿಸಲಾಗಿದೆ ಎಂದರು.

ಸಾರ್ವಜನಿಕರಿಗೆ ಅನುಕೂಲ ವಾಗುವಂತೆ ಟೂಡಾ ದಾಖಲಾತಿಗಳನ್ನು ಡಿಜಿಟಲೀಕರಣಕ್ಕೆ ಟೆಂಡರ್ ಕರೆಯಲಾಗಿದ್ದು, ಬೆಂಗಳೂರಿನ ಈ ಸ್ಟಾಂಡರ್ಡ್ ಸರ್ವೀಸ್ ಅವರಿಗೆ ಕಾರ್ಯಾದೇಶವನ್ನು ನೀಡಿ, ಈ ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

ಟೂಡಾ ವ್ಯಾಪ್ತಿಯಲ್ಲಿ 300 ನಾಗರಿಕ ನಿವೇಶನಗಳು (ಸಿ.ಎ) ಹಂಚಿಕೆಗೆ ಲಭ್ಯವಿದ್ದು, ಇವನ್ನು ಸರ್ಕಾರ ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ವಿತರಿಸಲು ಕ್ರಮವಹಿಸಲಾಗಿದೆ.ಶೆಟ್ಟಿಹಳ್ಳಿ ವಸತಿ ಬಡಾವಣೆ ವ್ಯಾಪ್ತಿಯಲ್ಲಿ ಟೂಡಾ ಆಯುಕ್ತರಿಗೆ ವಸತಿಗೃಹ ನಿರ್ಮಿಸಲು ಸಭೆಯಲ್ಲಿ ತೀರ್ಮಾನಿಸಿದ್ದು, ಟೆಂಡರ್ ಕರೆದು ಕ್ರಮಕೈಗೊಳ್ಳಲಾಗುವುದು ಎಂದರು.

ಟೂಡಾ ವತಿಯಿಂದ ಇದುವರೆಗೆ ಯಾವುದೆ ಲೇಔಟ್ ಮಾಡಿಲ್ಲ. ನಿವೇಶನ ವಿತರಿಸಿಲ್ಲ. ನಗರಕ್ಕೆ ಸಮೀಪದ ಹಳ್ಳಿಗಳ ಬಳಿ 420 ಎಕರೆ ಭೂಮಿಯನ್ನು ಈ ಹಿಂದೆ ಗುರುತಿಸಿದ್ದು, ಅಲ್ಲಿ ಲೇಔಟ್ ಮಾಡಿ, ನಿವೇಶನ ಹಂಚಿಕೆಗೆ ಕ್ರಮಕೈಗೊಳ್ಳುವುದಾಗಿ ಶಾಸಕ ಜಿ.ಬಿ. ಜ್ಯೋತಿಗಣೇಶ್ ತಿಳಿಸಿದರು.

ನಗರ ಪ್ರದೇಶದಲ್ಲಿ ನಿವೇಶನ ಹಂಚಿಕೆ ಕಷ್ಟವಾಗಿದ್ದು, ಭೂಮಿಯ ಬೆಲೆ ದುಬಾರಿಯಾಗಿರುವ ಕಾರಣ ಯಾರು ಸರ್ಕಾರದ ದರಕ್ಕೆ ಭೂಮಿ ನೀಡಲು ಮುಂದಾಗುವುದಿಲ್ಲ. ಇದು ನಿವೇಶನ ಹಂಚಿಕೆಗೆ ಕಷ್ಟವಾಗಿದೆ ಎಂದರು. ನಗರ ವ್ಯಾಪ್ತಿಯಲ್ಲಿ ಯಾರು ಸಹ ನಿಯಮ ಮೀರಿ ಹಾಗೂ ಸರ್ಕಾರಿ ಜಾಗ ಒತ್ತುವರಿ ಮಾಡಿ, ಕಟ್ಟಡ ನಿರ್ಮಿಸಬಾರದು ಇದನ್ನು ಉಲ್ಲಂಘಿಸಿ ಮಾಡಿದ್ದರೆ ಇಂದಲ್ಲ ನಾಳೆ ಅದನ್ನು ತೆರವುಗೊಳಿಸುವುದು ನಿಶ್ಚಿತ ಎಂದರು.

ಸುದ್ದಿಗೋಷ್ಠಿಯಲ್ಲಿ ಟೂಡಾ ಸದಸ್ಯರಾದ ಎನ್.ಹನುಮಂತಪ್ಪ, ಎಂ.ಎನ್.ವೀಣಾ, ಟಿ.ಎಲ್. ಪ್ರತಾಪ್‌ಕುಮಾರ್, ಜಗದೀಶ್, ಆಯುಕ್ತ ಯೋಗಾನಂದ್ ಮುಂತಾದವರು ಇದ್ದರು.

## ಆ.16–17: ವಿದ್ಯುತ್ ವ್ಯತ್ಯಯ

ತುಮಕೂರು: ಬೆಸ್ಕಾಂ ಗ್ರಾಮೀಣ ಉಪವಿಭಾಗ–2ರ ವ್ಯಾಪ್ತಿಯಲ್ಲಿ ವಾಹಕಗಳ ಬದಲಾವಣೆ ಕಾಮಗಾರಿ ಕೈಗೊಂಡಿರುವ ಹಿನ್ನೆಲೆಯಲ್ಲಿ ಆಗಸ್ಟ್ 16 ಮತ್ತು 17ರಂದು ಬೆಳಿಗ್ಗೆ 10 ರಿಂದ ಸಂಜೆ 6 ಗಂಟೆಯವರೆಗೆ ಹೆಬ್ಬೂರು, ಕಣಕುಪ್ಪೆ, ನಿಡುವಳಲು, ಬಳ್ಳಗೆರೆ, ಸಿರಿವಾರ ಗ್ರಾಮ ಪಂಚಾಯತಿಗಳ ವ್ಯಾಪ್ತಿಯ ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಲಿದ್ದು, ಗ್ರಾಹಕರು ಸಹಕರಿಸಬೇಕೆಂದು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮನವಿ ಮಾಡಿದ್ದಾರೆ.

# 110 ಯೂನಿಟ್ ರಕ್ತ ಸಂಗ್ರಹ

(1ನೇಪುಟದಿಂದ) ಬರಲಾಯಿತು ಎಂದರು.

ಈ ಸಂಬಂಧ ವಿವಿಧ ಸಂಘ ಸಂಸ್ಥೆಗಳೊಂದಿಗೆ ಮೂರು ಭಾರಿ ಚರ್ಚೆ ನಡೆಸಿ ಅಂತಿಮವಾಗಿ ಸ್ವಾತಂತ್ರ್ಯೋತ್ಸವದ ಮುನ್ನಾದಿನ ತುಮಕೂರಿನಿಂದ ರಕ್ತದಾನ ಶಿಬಿರ ಏರ್ಪಡಿಸುವ ಮೂಲಕ ಆಗಸ್ಟ್ 31ರವರೆಗೂ ಎಲ್ಲಾ 10 ತಾಲ್ಲೂಕುಗಳಲ್ಲೂ ಶಿಬಿರಗಳನ್ನು ಆಯೋಜಿಸಿ ಸುಮಾರು 2000ಕ್ಕೂ ಅಧಿಕ ಯೂನಿಟ್‌ಗಳ ರಕ್ತ ಸಂಗ್ರಹದ ಗುರಿ ಹೊಂದಲಾಗಿದೆ ಎಂದರು.

ಈ ಕಾರ್ಯದಿಂದ ಕೋವಿಡ್ 3ನೇ ಅಲೆ ಆತಂಕವನ್ನು ಸ್ವಲ್ಪಮಟ್ಟಿಗೆ ದೂರ ಮಾಡಲು ನಮ್ಮದೊಂದು ಸಣ್ಣ ಪ್ರಯತ್ನವಷ್ಟೇ ನಗರದಲ್ಲಿ ಆಯೋಜಿಸಲಾಗಿದ್ದ ರಕ್ತದಾನ ಶಿಬಿರದಲ್ಲಿ ಸ್ವಯಂ ಪ್ರೇರಕರಾಗಿ ಬಂದು ರಕ್ತದಾನ ಮಾಡಿದ್ದು, ಸುಮಾರು 110 ಯೂನಿಟ್ಸ್ ರಕ್ತ ಸಂಗ್ರಹವಾಗಿದೆ. ಪ್ರತಿವಾರ ಬೇರೆ ಬೇರೆ ತಾಲ್ಲೂಕುಗಳಲ್ಲಿ ರಕ್ತದಾನ ಶಿಬಿರ ಹಮ್ಮಿಕೊಳ್ಳುವ ನಿರ್ಧಾರವನ್ನೂ ಮಾಡಲಾಗಿದೆ. ಕೋವಿಡ್ ಸಂದರ್ಭದಲ್ಲೂ ಸಹ ಯುವಕರು ಬೇರೆ ಬೇರೆ ಸ್ಥಳಗಳಿಂದ ಆಗಮಿಸಿ ಆಸಕ್ತಿ ತೋರಿಸಿ ರಕ್ತದಾನ ಮಾಡಿದ್ದಕ್ಕೆ ಅಭಿನಂದನೆ ಸಲ್ಲಿಸುವುದಾಗಿ ತಿಳಿಸಿದರು.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ರಾಹುಲ್ ಕುಮಾರ್ ಶಹಪುರ್‌ವಾಡ್, ಕೋವಿಡ್ ಸಂದರ್ಭದಲ್ಲಿ ಉತ್ತಮವಾದ ಕಾರ್ಯವನ್ನು ಹಮ್ಮಿಕೊಂಡಿರುವುದು ಶ್ಲಾಘನೀಯ ನಾನೂ ಸಹ ಸಾಕಷ್ಟು ಭಾರಿ ರಕ್ತದಾನ ಮಾಡಿದ್ದೇನೆ. ಯುವಕರು, ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ರಕ್ತದಾನ ಮಾಡುವ ಮೂಲಕ ಮತ್ತೊಬ್ಬರ ಜೀವ ಉಳಿಸಿಬೇಕೆಂದು ಕರೆ ನೀಡಿದರು.

ಭಾರತೀಯ ರೆಡ್‌ಕ್ರಾಸ್ ಸಂಸ್ಥೆಯ ಸಭಾಪತಿಗಳಾದ ಎಸ್.ನಾಗಣ್ಣ ಮಾತನಾಡಿ, ಕೋವಿಡ್ ಮುಂಜಾಗ್ರತೆಯಿಂದ ಮೆಘಾ ರಕ್ತದಾನ ಶಿಬಿರವನ್ನು ಆಯೋಜಿಸುವ ಮೂಲಕ ಮುರಳೀಧರ ಹಾಲಪ್ಪ ಅವರು ವಿಶೇಷ ಕಾರ್ಯಕ್ರಮವನ್ನು ರೂಪಿಸಿದ್ದಾರೆ. ಇದಕ್ಕೆ ರೆಡ್‌ಕ್ರಾಸ್ ಸಂಸ್ಥೆಯೂ ಕೂಡ ಸಹಕಾರ ನೀಡುತ್ತಿದೆ ಎಂದರು.

ರೆಡ್‌ಕ್ರಾಸ್ ಸಂಸ್ಥೆಯ ಮುಖ್ಯ ಧ್ಯೇಯ ರಕ್ತದಾನ. ನಮ್ಮ ಭಾರತದ ಜನಸಂಖ್ಯೆ ಗನುಗುಣವಾಗಿ ಶೇ.1 ರಷ್ಟು ರಕ್ತ ಅವಶ್ಯಕತೆಯಿದೆ. ಡಯಾಲಿಸಿಸ್, ಕ್ಯಾನ್ಸರ್, ಹೆರಿಗೆ ಸಂದರ್ಭ, ಅಪಘಾತದ ಸಂದರ್ಭಗಳಲ್ಲಿ ರಕ್ತದಾನದ ಅವಶ್ಯಕತೆ ಹೆಚ್ಚಿನದಾಗಿದೆ ಎಂದು ಹೇಳಿದರು.

ಶಿಬಿರದಲ್ಲಿ ಸಿದ್ಧಗಂಗಾ ನರ್ಸಿಂಗ್ ಕಾಲೇಜಿನ ವಿದ್ಯಾರ್ಥಿ ಗಳು, ಜಿಲ್ಲಾಸ್ಪತ್ರೆಯ ರಕ್ತನಿಧಿ ಕೇಂದ್ರದ ಸಿಬ್ಬಂದಿ ಭಾಗವಹಿಸಿ ರಕ್ತದಾನ ಶಿಬಿರ ಯಶಸ್ವಿಗೊಳಿಸಿದರು. ಸಂಗ್ರಹವಾದ ರಕ್ತವನ್ನು ಜಿಲ್ಲಾಸ್ಪತ್ರೆಯ ಬ್ಲಡ್ ಬ್ಯಾಂಕ್‌ಗೆ ಹಸ್ತಾಂತರಿಸಲಾಯಿತು. ರಕ್ತದಾನ ಮಾಡಿದವರಿಗೆ ಜಿಲ್ಲಾಸ್ಪತ್ರೆಯಿಂದ ಪ್ರಶಂಸಾ ಪತ್ರ ನೀಡಲಾಯಿತು.

ಶಿಬಿರದಲ್ಲಿ ವಿದ್ಯೋದಯ ಫೌಂಡೇಷನ್ ಟ್ರಸ್ಟ್‌ನ ಪ್ರೊ. ಕೆ.ಚಂದ್ರಣ್ಣ, ಮಹಾನಗರಪಾಲಿಕೆ ಆಯುಕ್ತರಾದ ರೇಣುಕಾ, ಬಾಪೂಜಿ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಎಂ.ಬಸವಯ್ಯ, ರೆಡ್‌ಕ್ರಾಸ ಸಂಸ್ಥೆ ಜಿಲ್ಲಾಧ್ಯಕ್ಷರಾದ ಟಿ.ಬಿ.ಶೇಖರ್, ರೋಟರಿ ಅಧ್ಯಕ್ಷ ಬಸವರಾಜ್ ಹಿರೇಮಠ್, ಜಿಲ್ಲಾಸ್ಪತ್ರೆಯ ಜಿಲ್ಲಾ ಸರ್ಜನ್ ಡಾ.ಟಿ.ಎ.ವೀರಭದ್ರಯ್ಯ, ರೋಟರಿಯ ನಾಗರಾಜಶೆಟ್ಟಿ, ನಿಜಲಿಂಗಪ್ಪ, ಶ್ರೀನಿವಾಸಮೂರ್ತಿ, ಒನ್ ನೇಷನ್‌ನ ಪೃಥ್ವಿ ಹಾಲಪ್ಪ, ಸತ್ಯಸಾಯಿ ಆರ್ಗನೈಸೇಷನ್‌ನ ಸತ್ಯನಾರಾಯಣ, ಡಾ.ವಿಜಯ ರಾಘವೇಂದ್ರ, ಐಆರ್‌ಸಿಎಸ್ ನಿರ್ದೇಶಕ ಶಿವಕುಮಾರ್, ಜಿಲ್ಲಾ ಆಸ್ಪತ್ರೆಯ ಬ್ಲಡ್ ಬ್ಯಾಂಕ್‌ನ ಡಾ.ವೀಣಾ, ಮಹಾಲಕ್ಷ್ಮಿ, ಮರಿಚನ್ನಮ್ಮ, ನಟರಾಜ್, ಸ್ಕೌಟ್ಸ್ ಅಂಡ್ ಗೈಡ್ಸ್ ಸಂಸ್ಥೆಯ ವೇಣುಗೋಪಾಲ್, ಅಭಿಷೇಕ್, ಪವನ್, ಸೇರಿದಂತೆ ಗಿವ್ ಬ್ಯಾಕ್, ಎನ್‌ಸಿಸಿ, ಎನ್‌ಎಸ್‌ಎಸ್, ಐಎಂಎ, ಸಿದ್ಧಗಂಗಾ ಸಂಸ್ಥೆಗಳು, ತುಮಕೂರು ವಿಶ್ವವಿದ್ಯಾನಿಲಯ, ಆಟೋ ಯೂನಿಯನ್ ಸಂಸ್ಥೆಗಳ ಪದಾಧಿಕಾರಿಗಳು, ಸದಸ್ಯರು ಭಾಗವಹಿಸಿದ್ದರು.

# ಗುಬ್ಬಿ ಅಂಗನವಾಡಿ ಕಾರ್ಯಕರ್ತೆ, ಸಹಾಯಕಿ ಹುದ್ದೆಗಳಿಗೆ ಅರ್ಜಿ ಆಹ್ವಾನ

ತುಮಕೂರು: ಗುಬ್ಬಿ ಶಿಶು ಅಭಿವೃದ್ದಿ ಯೋಜನಾ ವ್ಯಾಪ್ತಿಯ ಅಂಗನವಾಡಿ, ಮಿನಿ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ 3 ಮೈನ್ ಕಾರ್ಯಕರ್ತೆ, 5 ಮಿನಿ ಅಂಗನವಾಡಿ ಕಾರ್ಯಕರ್ತೆ ಹಾಗೂ 15 ಸಹಾಯಕಿಯರ ತಾತ್ಕಾಲಿಕ ಹುದ್ದೆಗಳಿಗೆ ಅರ್ಹ ಮಹಿಳೆಯರಿಂದ ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಜಾಲತಾಣ www.anganwadirecruit.kar.nic.in ನ ಮೂಲಕ ಸೆಪ್ಟೆಂಬರ್ 4 ರೊಳಗಾಗಿ ಅರ್ಜಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಶಿಶು ಅಭಿವೃದ್ದಿ ಯೋಜನಾಧಿಕಾರಿಗಳ ಕಛೇರಿ, ಸಮಗ್ರ ಶಿಶು ಅಭಿವೃದ್ದಿ ಯೋಜನೆ, ರೈಲ್ವೇ ಸ್ಟೇಷನ್ ರಸ್ತೆ, ಗುಬ್ಬಿ ಇವರನ್ನು ಸಂಪರ್ಕಿಸಬಹುದಾಗಿದೆ.

ಗುಬ್ಬಿ ತಾಲ್ಲೂಕಿನ ಮಾವಿನಹಳ್ಳಿ ಗ್ರಾಮಪಂಚಾಯ್ತಿ ವ್ಯಾಪ್ತಿಯ ಮಣಿಕುಪ್ಪೆ, ಡಿ.ಚೆಂಗಾವಿ ಗ್ರಾಮಪಂಚಾಯ್ತಿಯ ವ್ಯಾಪ್ತಿಯ ಬುಕ್ಕಸಾಗರ, ಎಸ್.ಕೊಡಗಿಹಳ್ಳಿ ಗ್ರಾ.ಪಂ ವ್ಯಾಪ್ತಿಯ ಎಸ್. ಕೊಡಗಿಹಳ್ಳಿಪಾಳ್ಯ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಮೈನ್ ಕಾರ್ಯಕರ್ತೆಯರ ಹುದ್ದೆಗಳು ಸಾಮಾನ್ಯ ವರ್ಗಕ್ಕೆ ಮೀಸಲಾಗಿವೆ.

ಡಿ.ಚೆಂಗಾವಿ ಗ್ರಾ.ಪಂ ವ್ಯಾಪ್ತಿಯ ಕರಿಯಣ್ಣನಪಾಳ್ಯ ಗೊಲ್ಲರಹಟ್ಟಿ, ಇರಕಸಂದ್ರ ಗ್ರಾ.ಪಂ ವ್ಯಾಪ್ತಿಯ ಪಟ್ರಾವತನಹಳ್ಳಿ ಗೊಲ್ಲರಹಟ್ಟಿ, ಮಂಚಲದೊರೆ ಗ್ರಾ.ಪಂ ವ್ಯಾಪ್ತಿಯ ಕಾಳಿಂಗನಹಳ್ಳಿ, ಅಳಿಲುಘಟ್ಟ ಗ್ರಾ.ಪಂ ವ್ಯಾಪ್ತಿಯ ಬೋಗಸಂದ್ರ ಮಿನಿ ಅಂಗನವಾಡಿ ಕೇಂದ್ರಗಳಲ್ಲಿ ಖಾಲಿ ಇರುವ ಕಾರ್ಯಕರ್ತೆ ಹುದ್ದೆಗಳನ್ನು ಸಾಮಾನ್ಯ ವರ್ಗಕ್ಕೆ ಹಾಗೂ ಅಂಕಸಂದ್ರ ಗ್ರಾ.ಪಂ ವ್ಯಾಪ್ತಿಯ ಸಿರಿವಲ್ಲೆಹಳ್ಳಿ ಕೇಂದ್ರದಲ್ಲಿ ಖಾಲಿ ಇರುವ ಕಾರ್ಯಕರ್ತೆ ಹುದ್ದೆಯನ್ನು ಪರಿಶಿಷ್ಟ ಜಾತಿಗೆ ಮೀಸಲಿಡಲಾಗಿದೆ.

ಅಮ್ಮನಘಟ್ಟ ಗ್ರಾ.ಪಂ ವ್ಯಾಪ್ತಿಯ ಅಮ್ಮನಘಟ್ಟ ; ಬಿದರೆ ಗ್ರಾ.ಪಂ ವ್ಯಾಪ್ತಿಯ ಕೋಣನಕಲ್ಲು ; ಸಿ.ಎಸ್.ಪುರ ಗ್ರಾ.ಪಂ ವ್ಯಾಪ್ತಿಯ ಸಿ.ಎಸ್.ಪುರ ; ಹಾಗಲವಾಡಿ ಗ್ರಾ.ಪಂ ವ್ಯಾಪ್ತಿಯ ಗುಡ್ಡೇನಹಳ್ಳಿ ; ಹೇರೂರು ಗ್ರಾ.ಪಂ ವ್ಯಾಪ್ತಿಯ ಕಬ್ಬಿಣಸೇತುವೆಪಾಳ್ಯ ; ಇರಕಸಂದ್ರ ಗ್ರಾ.ಪಂ ವ್ಯಾಪ್ತಿಯ ಇರಕಸಂದ್ರ ಮರಾಠಿಪಾಳ್ಯ ಹಾಗೂ ಜಾಲಗುಣೆ ; ಕೊಪ್ಪ ಗ್ರಾ.ಪಂ ವ್ಯಾಪ್ತಿಯ ಅಳ್ಳೇನಹಳ್ಳಿ ಹಾಗೂ ಹೊನ್ನಶೆಟ್ಟಿಹಳ್ಳಿ, ಎಂ.ಎನ್.ಕೋಟೆ ಗ್ರಾ.ಪಂ ವ್ಯಾಪ್ತಿಯ ಉದ್ದೆಹೊಸಕೆರೆ ; ಮಂಚಲದೊರೆ ಗ್ರಾ.ಪಂ ವ್ಯಾಪ್ತಿಯ ಯರಬಹಳ್ಳಿ ; ನಲ್ಲೂರು ಗ್ರಾ.ಪಂ ವ್ಯಾಪ್ತಿಯ ನಲ್ಲೂರು ; ಶಿವಪುರ ಗ್ರಾ.ಪಂ ವ್ಯಾಪ್ತಿಯ ಓಬಳಾಪುರ ; ಪಟ್ಟಣಪಂಚಾಯ್ತಿ ವಾರ್ಡ್ ನಂ 5 ವ್ಯಾಪ್ತಿಯ ಮುಸ್ಲಿಂಬ್ಲಾಕ್ ಕೇಂದ್ರದಲ್ಲಿ ಖಾಲಿ ಇರುವ ಹುದ್ದೆಗಳು ಸಾಮಾನ್ಯ ವರ್ಗಕ್ಕೆ ಮತ್ತು ಇರಕಸಂದ್ರ ಗ್ರಾ.ಪಂ. ವ್ಯಾಪ್ತಿಯ ಜಾಲಗುಣೆ ಕೇಂದ್ರದಲ್ಲಿ ಖಾಲಿ ಇರುವ ಹುದ್ದೆಯನ್ನು ಪರಿಶಿಷ್ಟ ಪಂಗಡಕ್ಕೆ ಮೀಸಲಿಡಲಾಗಿದೆ.


# ಪಟ್ಟಣ ಪಂಚಾಯಿತಿ ಕಾರ್ಯಾಲಯ, ಗುಬ್ಬಿ.

Telephone: 08131–222248 e-mail: itstaff_ulb_gubbi@yahoo.in

ಸಂಖ್ಯೆ: ತುಪಪಂ (ಜೆಇ)/ಇತರೆ/06/2021–22 ದಿನಾಂಕ: 02–08–2021

## ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆಯಲ್ಲಿ ಅದ್ಯಾದೇಶ 2000ರ ನಿಯಮದಂತೆ ಮುನಿಸಿಪಲ್ ನಿಧಿಯಡಿ ಗುಬ್ಬಿ ಪಟ್ಟಣದ ನೀರು ಸರಬರಾಜು ವಿಭಾಗಕ್ಕೆ ಹಾಗೂ ಆರೋಗ್ಯ ಶಾಖೆಗೆ ಅಗತ್ಯ ಸಾಮಗ್ರಿಗಳ ಸರಬರಾಜು ಹಾಗೂ ಸೇವೆಗಳ ನೀಡಲು ಅರ್ಹ ಗುತ್ತಿಗೆದಾರರಿಂದ/ ಮಾರಾಟಗಾರರಿಂದ /ಸರಬರಾಜುದಾರರಿಂದ 05 ಕಾಮಗಾರಿಗೆ ಟೆಂಡರ್/ಕೊಟೇಷನ್ ಆಹ್ವಾನಿಸಲಾಗಿರುತ್ತದೆ. ಅರ್ಹ ಗುತ್ತಿಗೆದಾರರು ದಿನಾಂಕ: 17–08–2021ರ 16.30 ಗಂಟೆಯೊಳಗೆ ಈ ಕಛೇರಿಯಿಂದ ನೀಡುವ ಟೆಂಡರ್ ಫಾರಂ ಅನ್ನು ಭರ್ತಿ ಮಾಡಿ ಟೆಂಡರ್/ಕೊಟೇಷನ್‌ಗಳನ್ನು ಸಲ್ಲಿಸಬಹುದಾಗಿದೆ. ಟೆಂಡರ್/ಕೊಟೇಷನ್ ತೆರೆಯುವ ದಿನಾಂಕ: 17–08–2021ರ 16.45 ಗಂಟೆಗೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯ ತಾಂತ್ರಿಕ/ಆರೋಗ್ಯ ಶಾಖೆಯಿಂದ ಪಡೆಯಬಹುದಾಗಿದೆ.

| | | |
|---|---|---|
| ಸಹಿ/– | ಸಹಿ/– | ಸಹಿ/– |
| (ಜಿ.ಎನ್. ಅಣ್ಣಪ್ಪಸ್ವಾಮಿ) | (ಕೆ. ಮಹಾಲಕ್ಷ್ಮೀ) | (ಯೋಗೇಶ್ ಬಿ.ಎಸ್) |
| ಅಧ್ಯಕ್ಷರು | ಉಪಾಧ್ಯಕ್ಷರು | ಮುಖ್ಯಾಧಿಕಾರಿ |
| ಪಟ್ಟಣ ಪಂಚಾಯಿತಿ ಗುಬ್ಬಿ | ಪಟ್ಟಣ ಪಂಚಾಯಿತಿ ಗುಬ್ಬಿ | ಪಟ್ಟಣ ಪಂಚಾಯಿತಿ ಗುಬ್ಬಿ |


PRINTED BY: MANJUNATHA.P.N., PUBLISHED BY: MANJUNATHA.P.N., OWNED BY: MANJUNATHA.P.N., PRNTED AT: SRI MAJUNATHA PRINTERS, S.L.N.BUILDING, KEMPEGOWDA ROAD, AMARAJHOTHY NAGARA, TUMKURU DISTRICT. KARNATAKA. PUBLISHED AT: S.L.N.BUILDING, KEMPEGOWDA ROAD, AMARAJHOTHY NAGARA, TUMKURU DISTRICT. KARNATAKA. EDITOR: MANJUNATHA.P.N